ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ವಿಷಯ:** ದಿನಾಂಕ: 01.01.2019 ರಿಂದ ಅನ್ವಯಿಸುವಂತೆ ನಿವೃತ್ತಿ ವೇತನದಾರರಿಗೆ/ಕುಟುಂಬ ನಿವೃತ್ತಿ ವೇತನದಾರರಿಗೆ ತುಟ್ಟಿಭತ್ಯೆಯ ದರಗಳನ್ನು ಪರಿಷ್ಕರಿಸುವ ಬಗ್ಗೆ.

***

<u>ಓದಲಾಗಿದೆ:-</u>

1. ಪರಿಷ್ಕೃತ ವೇತನ ಮತ್ತು ಇತ್ಯಾದಿ ವಿಷಯಗಳ ಬಗ್ಗೆ ದಿನಾಂಕ: 02.03.2018 ರಂದು ಕವಿಪ್ರನಿ ನೌಕರರ ಸಂಘ(ನೋಂ.ಸಂ.659) ಮತ್ತು ನಿಗಮದ ಆಡಳಿತ ವರ್ಗದ ನಡುವೆ ಆದ ಒಪ್ಪಂದ.
2. ದಿನಾಂಕ: 01.04.2017 ರಿಂದ ಅನ್ವಯವಾಗುವಂತೆ ನಿವೃತ್ತಿ ವೇತನದಾರರಿಗೆ/ಕುಟುಂಬ ನಿವೃತ್ತಿ ವೇತನದಾರರಿಗೆ ಪಿಂಚಣಿಯನ್ನು ಪರಿಷ್ಕರಣೆ ಮಾಡಿ ಹೊರಡಿಸಿರುವ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/69518/2017-18 ದಿನಾಂಕ: 09.03.2018.
3. ದಿನಾಂಕ: 01.07.2017 ರಿಂದ ಅನ್ವಯವಾಗುವಂತೆ ಮಂಜೂರು ಮಾಡಲಾಗಿರುವ ಶೇಕಡ 45.25 ರಷ್ಟು ತುಟ್ಟಿಭತ್ಯೆಯನ್ನು 'ಡಿಯರ್‌ನೆಸ್ ಪೇ' ಎಂದು ಪರಿಗಣಿಸಿ ಹೊರಡಿಸಿರುವ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3610/2003-04 ದಿನಾಂಕ: 21.06.2018.
4. ದಿನಾಂಕ: 01.07.2017 ರಿಂದ ಮಂಜೂರು ಮಾಡಲಾಗಿರುವ ಶೇಕಡ 45.25 ತುಟ್ಟಿಭತ್ಯೆಯನ್ನು ಮೂಲ ಪಿಂಚಣಿ/ ಕುಟುಂಬ ಪಿಂಚಣಿಗೆ ವಿಲೀನಗೊಳಿಸಿ ಹಾಗೂ ದಿನಾಂಕ: 01.07.2017 ರ ನಂತರ ನಿವೃತ್ತರಾಗುವ ನೌಕರರಿಗೆ ಪಿಂಚಣಿಯನ್ನು ಮಂಜೂರು ಮಾಡುವಾಗ ಶೇಕಡ 45.25 ತುಟ್ಟಿಭತ್ಯೆಯನ್ನು ವೇತನದ ಭಾಗವೆಂದು ಪರಿಗಣಿಸುವಂತೆ ಹೊರಡಿಸಿರುವ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/69518/2017-18 ದಿನಾಂಕ: 29.06.2018.
5. ದಿನಾಂಕ: 01.07.2018 ರಿಂದ ಅನ್ವಯವಾಗುವಂತೆ ನಿಗಮದ ಪಿಂಚಣಿ/ ಕುಟುಂಬ ಪಿಂಚಣಿದಾರರಿಗೆ ತುಟ್ಟಿಭತ್ಯೆಯನ್ನು ಶೇಕಡ 3.75 ರಷ್ಟು ಮಂಜೂರು ಮಾಡಿ ಹೊರಡಿಸಿರುವ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3611/2003-04, ದಿನಾಂಕ: 29.06.2018.
6. ದಿನಾಂಕ: 01.01.2019 ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರಿಗೆ/ಕುಟುಂಬ ನಿವೃತ್ತಿ ವೇತನದಾರರಿಗೆ ಶೇಕಡ 3.75 ರಿಂದ ಶೇಕಡ 6.50 ತುಟ್ಟಿಭತ್ಯೆಯ ದರವನ್ನು ಪರಿಷ್ಕರಣೆ ಮಾಡಿ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಆಇ 1 ಎಸ್‌ಆರ್‌ಪಿ 2019 ದಿನಾಂಕ: 28.03.2019.
7. ನಿಗಮ ಕಾರ್ಯಾಲಯದ ದಿನಾಂಕ: 08.04.2019 ರ ಟಿಪ್ಪಣಿ.

**ಆದೇಶ ಸಂಖ್ಯೆ; ಕವಿಪ್ರನಿನಿ/ಬಿ16/3611/2003-04, ಬೆಂಗಳೂರು, ದಿನಾಂಕ:** 11 APR 2019

1. ನಿಗಮದಿಂದ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವ ಎಲ್ಲಾ ನಿವೃತ್ತಿ ವೇತನದಾರರಿಗೆ/ಕುಟುಂಬ ನಿವೃತ್ತಿ ವೇತನದಾರರಿಗೆ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇ.3.75 ರಷ್ಟಿರುವ ತುಟ್ಟಿಭತ್ಯೆಯ ದರವನ್ನು ಶೇ.6.50 ಕ್ಕೆ, ದಿನಾಂಕ: 01.01.2019 ರಿಂದ ಜಾರಿಗೆ ಬರುವಂತೆ ಹೆಚ್ಚಿಸಿ ಮಂಜೂರು ಮಾಡಲಾಗಿದೆ.

2. ಪರಿಷ್ಕರಿಸಿದ ದರದಲ್ಲಿ ತುಟ್ಟಿಭತ್ಯೆಯನ್ನು ಜನವರಿ-2019 ರಿಂದ ಮುಂದಕ್ಕೆ ಮತ್ತು ಮರು ಆದೇಶ ಹೊರಡಿಸುವವರೆಗೆ ನಗದಾಗಿ ಪಾವತಿ ಮಾಡುವುದು.

3. ಈ ಆದೇಶದಿಂದಾಗಿ ಪಾವತಿಸಬೇಕಾದ ತುಟ್ಟಿಭತ್ಯೆಯ ಮೊತ್ತದಲ್ಲಿ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಕಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಗೆ:

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

www.kptcl.com/eprasarana for information of:

6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರ, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪಿಂಚಣಿದಾರರ ಸಂಘ, ಕಾವೇರಿ ಭವನ ಬೆಂಗಳೂರು.